**File No.DPAR/50/EGM/2019-DS-dparegovsec**

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: **ಗಣಕಯಂತ್ರ ಹಾಗೂ ಅದಕ್ಕೆ ಸಂಬಂಧಿಸಿದ ಕೆಲವೊಂದು ಉಪಕರಣಗಳ ಪೂರ್ವ ನಿರ್ಧಾರಿತ ತಾಂತ್ರಿಕ ವಿಶಿಷ್ಟತೆಗಳನ್ನು** (Technical Specifications) **ಉಪಯೋಗಿಸಿಕೊಂಡು ಖರೀಧಿಸುವ ಬಗ್ಗೆ:**

**ಓದಲಾಗಿದೆ:**

1. ದಿನಾಂಕ: 31.12.1999 ರ ಸರ್ಕಾರದ ಆದೇಶ ಸಂಖ್ಯೆ: ಪಿಡಿ 121 ಸಿಸಿಎಸ್ 1997.
2. ದಿನಾಂಕ: 14.06.2019 ರಂದು ನಡೆದ ರಾಜ್ಯ ಮಟ್ಟದ ತಾಂತ್ರಿಕ ಸಲಹಾ ಸಮಿತಿಯ ಉಪ ಸಮಿತಿಯ ನಡವಳಿ.
3. ದಿನಾಂಕ: 08.07.2019 ರಂದು ನಡೆದ ರಾಜ್ಯ ಮಟ್ಟದ ತಾಂತ್ರಿಕ ಸಲಹಾ ಸಮಿತಿಯ ನಡವಳಿ.

**ಪ್ರಸ್ತಾವನೆ:**

1. ಮೇಲೆ (1)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ, ವಿವಿಧ ಇಲಾಖೆಗಳು ಖರೀಧಿಸಲಿರುವ ಗಣಕಯಂತ್ರ ಹಾಗೂ ಇತರ ಪರಿಕರಗಳ ತಾಂತ್ರಿಕ ವಿಶಿಷ್ಟತೆಗಳನ್ನು **(Technical Specifications)**, ಆಯಾ ಇಲಾಖೆಗಳ ಅಪರ ಮುಖ್ಯ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ರಚಿತವಾಗಿರುವ ತಾಂತ್ರಿಕ ಸಲಹಾ ಸಮಿತಿಯ ಅನುಮೋದನೆ ಪಡೆಯುವಂತೆ ಆದೇಶಿಸಲಾಗಿದೆ.
2. ವಿವಿಧ ಇಲಾಖೆಗಳಿಗೆ ಬೇಕಾಗಿರುವ ಉಪಕರಣಗಳ ತಾಂತ್ರಿಕ ವಿಶಿಷ್ಟತೆಗಳ **(Technical Specifications)** ಅನುಮೋದನೆಗಾಗಿ ಆಗುತ್ತಿರುವ ವಿಳಂಬ ಮತ್ತು ಒಂದೇ ತರಹದ ಕಾರ್ಯಗಳಿಗೆ ವಿವಿಧ ನಮೂನೆಯ ಉಪಕರಣಗಳ ತಾಂತ್ರಿಕ ವಿಶಿಷ್ಟತೆಗಳ **(Technical Specifications)** ವೈವಿಧ್ಯತೆ ಹಾಗೂ ಅದರಿಂದಾಗಿ ಬೆಲೆಗಳಲ್ಲಿನ ವ್ಯತ್ಯಾಸ ಮುಂತಾದವುಗಳು ಸರ್ಕಾರದ ಗಮನಕ್ಕೆ ಬಂದಿದೆ.
3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ)ಯವರ ಅಧ್ಯಕ್ಷತೆಯಲ್ಲಿ ರಚಿತವಾಗಿರುವ ರಾಜ್ಯ ಮಟ್ಟದ ತಾಂತ್ರಿಕ ಸಲಹಾ ಸಮಿತಿಯ ಉಪ ಸಮಿತಿಯು ಪರಿಶೀಲಿಸಿ, ವಿವಿಧ ಹಾರ್ಡ್‌ವೇರ್ ಉಪಕರಣಗಳ ತಾಂತ್ರಿಕ ವಿಶಿಷ್ಟತೆಗಳ **(Technical Specifications)** ಪಟ್ಟಿಯನ್ನು ಮೇಲೆ ಓದಲಾದ (2)ರ ನಡವಳಿಯ ಮೂಲಕ ಶಿಫಾರಸ್ಸು ಮಾಡಿದೆ.
4. ಸಾಮಾನ್ಯವಾಗಿ ಖರೀಧಿಸುವ ಗಣಕಯಂತ್ರಗಳು, ಆಲ್-ಇನ್-ಒನ್, ಲ್ಯಾಪ್-ಟಾಪ್, ಪ್ರಿಂಟರ್, ಸ್ಕ್ಯಾನರ್, ಎಮ್.ಎಫ್.ಡಿ., ಟ್ಯಾಬ್ಲೆಟ್, ಎಲ್.ಸಿ.ಡಿ. ಪ್ರೋಜೆಕ್ಟರ್, ಯು.ಪಿ.ಎಸ್. ಮುಂತಾದ ಕೆಲವೊಂದು ಉಪಕರಣಗಳ ಪೂರ್ವವಾಗಿ ಸಿದ್ಧಪಡಿಸಿದ ತಾಂತ್ರಿಕ ವಿಶಿಷ್ಟತೆಗಳನ್ನು **(Technical**

**Specifications)** ಮೇಲೆ (3)ರಲ್ಲಿ ಓದಲಾದ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ದಿನಾಂಕ 08.07.2019 ರ ರಾಜ್ಯ ಮಟ್ಟದ ತಾಂತ್ರಿಕ ಸಲಹಾ ಸಮಿತಿಯ ಸಭೆಯ ನಡವಳಿಯಂತೆ ಅನುಮೋದಿಸಲಾಗಿದೆ. ಇವುಗಳನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಇ-ಆಡಳಿತ)ಯ ವೈಬ್-ಸೈಟಿನಲ್ಲಿ ಅಳವಡಿಸಲೂ ಸಹ ನಡವಳಿಯಲ್ಲಿ ಅನುಮೋದಿಸಲಾಗಿದೆ.

5. ವಿವಿಧ ಇಲಾಖೆಗಳು ತಮ್ಮ ಇಲಾಖಾ ತಾಂತ್ರಿಕ ಸಲಹಾ ಸಮಿತಿಯ ಅನುಮೋದನೆ ಇಲ್ಲದೇ, ತಮಗೆ ಸೂಕ್ತವಾಗುವ ವಿಶಿಷ್ಟತೆಯನ್ನು ಆಯ್ಕೆ ಮಾಡಿಕೊಂಡು , ಪ್ರತಿ ಟೆಂಡರಗೆ 25 ಲಕ್ಷ ರೂಪಾಯಿಗಳ ಮೊತ್ತ ಮೀರದಂತೆ , ಆಯಾ ಆಡಳಿತ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಯವರ ಆಡಳಿತಾತ್ಮಕ ಅನುಮೋದನೆ ಪಡೆದು ಖರೀಧಿಸಬಹುದೆಂದು ಪ್ರಸ್ತಾಪಿಸಲಾಗಿದೆ.

6. ಸದರಿ ಪೂರ್ವ ನಿರ್ಧಾರಿತ ತಾಂತ್ರಿಕ ವಿಶಿಷ್ಟತೆಗಳು **(Technical Specifications)** ಸೂಕ್ತವಾಗದೇ ಇದ್ದಲ್ಲಿ, ಅಂತಹ ಪರಿಕರಗಳ ತಾಂತ್ರಿಕ ವಿಶಿಷ್ಟತೆಗಾಗಿ ಇಲಾಖಾ ತಾಂತ್ರಿಕ ಸಲಹಾ ಸಮಿತಿಯ ಅನುಮೋದನೆ ಪಡೆದು ಖರೀಧಿಸಲು ಆಸ್ಪದ ಇರುತ್ತದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 50 ಇಆಇ 2019,**

**ಬೆಂಗಳೂರು ದಿನಾಂಕ: 06 ನೇ ಸೆಪ್ಟೆಂಬರ್ 2019.**

7. ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳ ಹಿನ್ನಲೆಯಲ್ಲಿ, ಇಲಾಖೆಗಳು ಸಾಮಾನ್ಯವಾಗಿ ಖರೀಧಿಸುವ ಗಣಕಯಂತ್ರಗಳು, ಆಲ್-ಇನ್-ಒನ್, ಲ್ಯಾಪ್-ಟಾಪ್, ಪ್ರಿಂಟರ್, ಸ್ಕ್ಯಾನರ್, ಎಮ್.ಎಫ್.ಡಿ., ಟ್ಯಾಬ್ಲೆಟ್, ಎಲ್.ಸಿ.ಡಿ. ಪ್ರೊಜೆಕ್ಟರ್, ಯು.ಪಿ.ಎಸ್. ಮುಂತಾದ ಉಪಕರಣಗಳ ಪೂರ್ವವಾಗಿ ಸಿದ್ಧಪಡಿಸಿದ ತಾಂತ್ರಿಕ ವಿಶಿಷ್ಟತೆಗಳನ್ನು **(Technical Specifications)** **ಅನುಬಂಧ-1** ರ ಟೇಬಲ್-1 ರಿಂದ ಟೇಬಲ್-29 ಗಳಲ್ಲಿ ನೀಡಲಾಗಿದ್ದು, ವಿವಿಧ ಇಲಾಖೆಗಳು ತಮ್ಮ ಇಲಾಖಾ ತಾಂತ್ರಿಕ ಸಲಹಾ ಸಮಿತಿಯ ಅನುಮೋದನೆ ಇಲ್ಲದೇ, ತಮಗೆ ಸೂಕ್ತವಾಗುವ ವಿಶಿಷ್ಟತೆಯನ್ನು ಆಯ್ಕೆ ಮಾಡಿಕೊಂಡು, ಪ್ರತಿ ಟೆಂಡರಗೆ 25 ಲಕ್ಷ ರೂಪಾಯಿಗಳ ಮೊತ್ತ ಮೀರದಂತೆ , ಆಯಾ ಆಡಳಿತ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ / ಪ್ರಧಾನ ಕಾರ್ಯದರ್ಶಿ/ ಕಾರ್ಯದರ್ಶಿಯವರ ಆಡಳಿತಾತ್ಮಿಕ ಅನುಮೋದನೆ ಪಡೆದು ಖರೀಧಿಸಬಹುದೆಂದು ಈ ಮೂಲಕ ಆದೇಶಿಸಿದೆ.

8. ಪೂರ್ವ ನಿರ್ಧಾರಿತ ತಾಂತ್ರಿಕ ವಿಶಿಷ್ಟತೆಗಳ (Technical Specifications) ಪಟ್ಟಿಯು https://www.karnataka.gov.in ವೆಬ್ ಪುಟದಲ್ಲಿ ಲಭ್ಯವಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

6-9-19
(ವೀರಭದ್ರ)
ಪೀಠಾಧಿಕಾರಿ-1,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ
(ಇ-ಆಡಳಿತ)

1. ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
3. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು.
4. ಸರ್ಕಾರದ ಎಲ್ಲಾ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು.
5. ಎಲ್ಲಾ ಕ್ಷೇತ್ರೀಯ ಇಲಾಖೆಗಳ ಮುಖ್ಯಸ್ಥರಿಗೆ.
6. ಮಹಾ ಲೇಖಾಪಾಲಕರು, ಲೆಕ್ಕಪತ್ರ 1 ಮತ್ತು 2, ಕರ್ನಾಟಕ, ಬೆಂಗಳೂರು.
7. ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
8. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-1), ವಿಧಾನಸೌಧ, ಬೆಂಗಳೂರು.
9. ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ ಬೆಂಗಳೂರು ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟನೆಗಾಗಿ.
10. ಸಂಬಂಧಪಟ್ಟ ಸಂಸ್ಥೆಗಳು.
11. ಶಾಖಾ ರಕ್ಷಕ ಕಡತ / ಹೆಚ್ಚುವರಿ ಪ್ರತಿಗಳು.